



# ಕಳೆಯಲ್ಲವೀ ಗಿಡವು...

ಮಣ್ಣಿಂದ ಕಾಯ ಮಣ್ಣಿಂದ; ಮಣ್ಣು ಬಿಟ್ಟವರಿಗೆ ಆಧಾರವಿಲ್ಲ...' ಸಂಗೀತ ಪಿತಾಮಹ ಪುರಂದರದಾಸರ ಈ ರಚನೆ ಮಣ್ಣಿಗೆ ಸಂಬಂಧಿಸಿದ್ದು. ಆಹಾರ ಉತ್ಪಾದನೆಗೆ ಮಣ್ಣಿಂದೇ ಪ್ರಧಾನ ಪಾತ್ರ. ಈ ಮಣ್ಣಿನ ಫಲವತ್ತತೆ ಸಂರಕ್ಷಣೆ ನಮ್ಮ ಹೊಣೆಯೂ ಹೌದು. ನಮ್ಮ ಸುತ್ತಮುತ್ತ ಇರುವ ಕೆಲವೊಂದು ಗಿಡಗಳು 'ಮಣ್ಣು ಮಿತ್ರ' ಎನಿಸಿಕೊಂಡಿವೆ. ಮಣ್ಣುಗಳ ಆರೋಗ್ಯ ಹತೋಟಿಗೆ ತರುವಲ್ಲಿ ಈ ಗಿಡಗಳು ಪ್ರಮುಖ ಪಾತ್ರ ವಹಿಸುತ್ತವೆ. ಇದೊಂದು ರೀತಿಯಲ್ಲಿ ಮಣ್ಣೇ ತನ್ನ ಗಾಯಗಳನ್ನು ಶಮನಗೊಳಿಸಲು ತಾನೇ ಸೃಷ್ಟಿಸುವ ಮೂಲಿಕೆಯಂತೆ.



ಈ ಗಿಡಗಳನ್ನು 'ಮಣ್ಣು ಮಿತ್ರ' ಗಿಡಗಳೆಂದು ಕರೆಯಲು ಕಾರಣಗಳಿವೆ. ಮೂಲತ: ಈ ಬಗೆಯ ಗಿಡಗಳು ನಮ್ಮಲ್ಲಿನ ಮಣ್ಣುಗಳನ್ನು ಬಿಸಿಲಿಗೆ ಬೇಯದಂತೆ, ಭಾರೀ ಮಳೆಗೆ ಮುಕ್ಕಾಗದಂತೆ. ರಭಸದಿಂದ ಬೀಸುವ ಗಾಳಿಗೆ ಚದುರದಂತೆ ರಕ್ಷಿಸುತ್ತಿವೆ. ಇದಕ್ಕಾಗಿಯೇ **Weeds are the guardians of soils** ಎಂದು ಕರೆಯುವುದು.

ವಿನಾಕಾರಣ 'ಕಳೆಗಳು' (**Weeds**) 'ಅನಗತ್ಯ ಗಿಡಗಳು' ಎಂಬ ಆರೋಪಕ್ಕೆ ಗುರಿಯಾಗಿವೆ. ತನ್ನ ಮೇಲಿನ ಆರೋಪ ಸುಳ್ಳೆಂದು ವಾದಿಸುವ ಅವಕಾಶವೂ ಈ ಗಿಡಗಳಿಗೆ ದಕ್ಕಲಿಲ್ಲ. ಯಾವುದೇ ಬಗೆಯ ವಿಚಾರಣೆ ನಡೆಯದೆಯೇ, ಇವುಗಳ ವಾದವನ್ನು ಅಸಲಿಗೆ ಆಲಿಸದೆಯೇ, ಇವು ಮಾಡಿರುವ ದ್ರೋಹವಾದರೂ ಏನು ಎಂಬುದೂ ಸಹ ಸ್ಪಷ್ಟವಾಗಿ ಸಾಬೀತಾಗದೆ, ನಯವಂಚಕ ಕಂಪನಿಗಳ ಹುನ್ನಾರದಿಂದಾಗಿ 'ಕಳೆನಾಶಕ'ಗಳಿಂದ ಮರಣದಂಡನೆಗೆ ಗುರಿಯಾಗಿರುವ ಅಮಾಯಕ ಗಿಡಗಳಿವು.

ಸಹಜವಾಗಿ ಬೆಳೆಯುವ ಈ ವೈವಿಧ್ಯಮಯ ಗಿಡಗಳು ಪ್ರಕೃತಿಯ ಕೊಡುಗೆ. ಜೀವಸಂಕುಲದ ನಿರ್ಮಾಣವೇ ಇವುಗಳಲ್ಲಿರುವ ಮೂಲ ಗುಣ. ಯಾವುದೇ ಪ್ರದೇಶದಲ್ಲೂ ಕಾಲೂರಿ ನಿಂತು ಬೆಳೆಯುವ ಈ ಗಿಡಗಳು 'ಏಕಬೆಳೆ' ಸಂಸ್ಕೃತಿಗೆ ಸವಾಲಾಗಿ ನಿಂತಿವೆ. ತನ್ನ ಮೇಲಾಗುತ್ತಿರುವ ತೀವ್ರತರದ ದಾಳಿಗಳಿಗೂ ಜಗ್ಗದೆ ನಿರಂತರವಾಗಿ ಬೆಳೆಯುತ್ತಲೂ ಇವೆ. ಏಕಬೆಳೆ ಪದ್ಧತಿಯನ್ನು 'ಜೀವನಾಶೀ' ಎಂದೂ ತನ್ನದೇ ರೀತಿಯಲ್ಲಿ ವಿರೋಧಿಸುತ್ತಿರುವ ಜೀವಿಗಳಲ್ಲಿ ಬಹುಶಃ ಈ ಬಗೆಯ ಗಿಡಗಳೇ ಮೊದಲಿರಬಹುದು.

## ಮಣ್ಣುಮಿತ್ರ ಗಿಡದ ಪ್ರಯೋಜನ

- ಬೆಳೆಯುವ ಬಹುತೇಕ ಬೆಳೆಗಳಿಗೆ ಎಟುಕಲಾಗದ ಪ್ರಮುಖ ಪೋಷಕಾಂಶ ಖನಿಜಾಂಶಗಳನ್ನು ಈ ಗಿಡಗಳು ಮಣ್ಣೊಳಗೆ ಆಳವಾಗಿಳಿಯುವ ತಮ್ಮ ಬೇರುಗಳಿಂದ ಮೇಲ್ಭಾಗಕ್ಕೆ ರವಾನಿಸಿ ಅವು ಬೆಳೆಯುವ ಬೆಳೆಗಳಿಗೆ ಸಿಗುವಂತೆ ಮಾಡುತ್ತವೆ.
- ಈ ಗಿಡಗಳು ತಮ್ಮ ಬೇರು ವ್ಯವಸ್ಥೆಯ ಮೂಲಕ ಮಣ್ಣ ಕೆಳಭಾಗದಲ್ಲಿನ ತೇವಾಂಶವನ್ನು ಮೇಲ್ಭಾಗಕ್ಕೆ ತಲುಪಿಸುತ್ತವೆ.
- ಹದಗೆಟ್ಟು ಗಟ್ಟಿಯಾಗಿರುವ ಮಣ್ಣಿನ ಪದರಗಳನ್ನು ಭೇದಿಸುತ್ತವೆ.
- ಎಂತಹ ಪ್ರತಿಕೂಲ ವಾತಾವರಣದಲ್ಲೂ ಬೆಳೆಯುವ ತಾಕತ್ತನ್ನು ಹೊಂದಿದೆ.

■ ಪಿ. ಶ್ರೀನಿವಾಸ್

